# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 293 (2156)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಪಿ. ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು )

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

ವಿಷಯ : ಬೆಂಗಳೂರು ನಗರದಲ್ಲಿರುವ ಕೆರೆಗಳ ಪರಿಸ್ಥಿತಿ ಕುರಿತು

(ಅ) ಬೆಂಗಳೂರು ನಗರದಲ್ಲಿ ಕಂದಾಯ ದಾಖಲೆಗಳ ಪ್ರಕಾರ ಒಟ್ಟು ಎಷ್ಟು ಕೆರೆಗಳಿವೆ; ಎಷ್ಟು ಕೆರೆಗಳು ಕೆರೆಯ ಗುಣಲಕ್ಷಣಗಳನ್ನು ಕಳೆದುಕೊಂಡು ಇತರ ಚಟುವಟಿಕೆಗೆ ಉಪಯೋಗವಾಗಿವೆ; ಒಟ್ಟು ಎಷ್ಟು ಕೆರೆಗಳಲ್ಲಿ ನೀರಿನ ಸಂಗ್ರಹಣೆ ಇದೆ ಹಾಗೂ ಎಷ್ಟು ಕೆರೆಗಳನ್ನು ಪುನಶ್ಚೇತನಗೊಳಿಸಲಾಗಿದೆ; ಮುಂದೆ ಪುನಶ್ಚೇತನಗೊಳಿಸಲು ಅವಶ್ಯಕತೆ ಇರುವ ಕೆರೆಗಳ ಸಂಖ್ಯೆ ಎಷ್ಟು; (ವಿವರವಾದ ಮಾಹಿತಿಯನ್ನು ನೀಡುವುದು)

(ಆ) ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ವತಿಯಿಂದ ನಗರದಲ್ಲಿ ಹೊಸದಾಗಿ ಬಿಬಿಎಂಪಿಗೆ ಸೇರ್ಪಡೆಗೊಂಡ ಅಧಿಕೃತ ಹಾಗೂ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಾಣಗೊಂಡಿರುವ (UGD) ಒಳಚರಂಡಿ ಸಂಪರ್ಕ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆಯೇ; ಈ ಹೊಸ ಒಳಚರಂಡಿ ವ್ಯವಸ್ಥೆಯ ತ್ಯಾಜ್ಯ ನೀರು ಸ್ಥಳೀಯ ಕೆರೆಗಳಿಗೆ/ಹಳ್ಳಗಳಿಗೆ/ತಗ್ಗು ಪ್ರದೇಶಗಳಿಗೆ ಹರಿಯುತ್ತಿದ್ದೆಯೇ; ಹೊಸ ಒಳಚರಂಡಿ ವ್ಯವಸ್ಥೆಗೆ ಎಸ್‌ಟಿಪಿಗಳಿಗೆ ಸಂಪರ್ಕ ಒದಗಿಸಲಾಗಿದೆಯೇ; ಈ ಕುರಿತಂತೆ ಸರ್ಕಾರದ ನಿಲುವೇನು? (ವಿವರವಾದ ಮಾಹಿತಿ ನೀಡುವುದು)